**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ ಸಂಖ್ಯೆ: 483/2025**

| | | | |
|---|---|---|---|
| ಹೆಸರು | | ಶ್ರೀ ಬಾಸ್ಕರ್ | ಚಾಸಾಃ 03 |
| ತಂದೆ ಹೆಸರು | | ಶ್ರೀ ಲೇಟ್ ಕೃಷ್ಣ | ಫ್ರಾಸಾಃ 03 |
| ವಯಸ್ಸು | | 48 ವರ್ಷ | ಸಾಕ್ಷಿಯನ್ನು ದಿನಾಂಕಃ 19.01.2026 ರಂದು ಪ್ರಮಾಣೀಕರಿಸಲಾಯಿತು. |
| ಉದ್ಯೋಗ | | ವ್ಯಾಪಾರ | |
| ವಾಸ | | ಬೇಗೂರು ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ–**

ಚಾಸಾ–1 ನನಗೆ ಗೊತ್ತು. ನಮ್ಮ ಅಂಗಡಿ ಪಕ್ಕದಲ್ಲಿ ಚಾಸಾ–1 ರವರ ಕಟ್ಟಡ ಇದೆ. ದಿಃ 27.05.2025 ರಂದು ಸಂಜೆ 7.00 ಗಂಟೆಗೆ ಆರೋಪಿತರು ಚಾಸಾ–2 ರವರ ಮೇಲೆ ಗಲಾಟೆ ಮಾಡುತ್ತಿದ್ದರು. ನಾನು ಅವರನ್ನು ಸಮಾಧಾನ ಮಾಡಿ ಕಳುಹಿಸಿದೆ. ದಿಃ 28.05.2025 ರಂದು ಬೆಳಿಗ್ಗೆ 10.30 ಗಂಟೆ ಸಮಯಕ್ಕೆ ಮತ್ತೆ ಆರೋಪಿಗಳು ಗಲಾಟೆ ಶುರುಮಾಡಿದರು. ಗಲಾಟೆ ಶಬ್ಧ ಕೇಳಿ ನಾನು ಚಾಸಾ–1 ರವರ ಕಟ್ಟಡಕ್ಕೆ ಹೋದೆ. ಆರೋಪಿಗಳು ಚಾಸಾ–1 ರವರನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು ಮತ್ತು ಕೊಲೆ ಬೆದರಿಕೆ ಹಾಕಿದರು. ಆರೋಪಿಗಳು ಚಾಸಾ–1 ರವರನ್ನು ಬೊಳಿ ಮಗನೆ ಸೂಳೆ ಮಗನೆ ಎಂದು ಬೈದು ಚಾಸಾ–1 ರವರನ್ನು ಕೊಲೆ ಮಾಡುವುದಾಗಿ ಬೇದರಿಕೆ ಹಾಕಿದರು. ನಾನು, ಚಾಸಾ–4 ರವರು ಜಗಳ ಬಿಡಿಸಿದೇವು.

ಚಾಸಾ–1 ರವರನ್ನು ಏಕೆ ಗಲಾಟೆಯಾಯಿತು ಎಂದು ಕೇಳಿದೇವು. ಅದಕ್ಕೆ ಅತೀಕ್ರಮವಾಗಿ ತಮ್ಮ ಕಟ್ಟಡ ಪ್ರವೇಶಿಸಿ ಆರೋಪಿಗಳು ಗಲಾಟೆ ಮಾಡುತ್ತಿದ್ದಾರೆ ಎಂದು ಚಾಸಾ–1 ರವರು ಹೇಳಿದರು. ಗಲಾಟೆಯ ವಿಷಯವಾಗಿ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು 3ನೇ

ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರಿದ್ದು ಅವರ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ಆರೋಪಿಗಳ ಪರ ವಕೀಲರು ನುಡಿದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

**ಪಾಟೀ ಸವಾಲು: ಮಾನ್ಯ ಎಪಿಪಿ ಯವರಿಂದಃ**

1 ರಿಂದ 7ನೇ ಆರೋಪಿಗಳು ಸದರಿ ದಿನಾಂಕದಂದು ಚಾಸಾ-1 ರವರ ಮೇಲೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-1 ರವರು ಏಕೆ ಅತೀಕ್ರಮ ಪ್ರವೇಶ ಮಾಡಿದ್ದೀರಿ ಎಂದು ಕೇಳಿದಾಗ ಜಾಗ ನಮ್ಮದು ಎಂದು ತಂಟೆ ತೆಗೆದು ಆರೋಪಿಗಳ ಜಗಳ ಮಾಡಿದರು ಎಂದರೆ ಸರಿ. ಚಾಸಾ-1 ರವರು ಆರೋಪಿಗಳ ದಾವೆ ವಜವಾಗಿದೆ ಆ ಕಾರಣ ಸದರಿ ಸ್ವತ್ತು ನನ್ನದು ಎಂದು ಹೇಳಿದರು ಎಂದರೆ ಸರಿ. ಚಾಸಾ-1 ರವರು ತೊಂದರೆ ಕೊಡಬೇಡಿ ಎಂದು ಆರೋಪಿಗಳನ್ನು ಕೇಳಿಕೊಂಡರು ಎಂದರೆ ಸರಿ. ಗಲಾಟೆಯಾದ ವಿಷಯವನ್ನು ಚಾಸಾ-2 ರವರು ಚಾಸಾ-1 ರವರಿಗೆ ತಿಳಿಸಿದರು ಎಂದರೆ ಸರಿ. ಸದರಿ ವಿಷಯವಾಗಿ ಚಾಸಾ-1 ರವರು ದೂರು ನೀಡಿದ್ದಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ**

ಸುಮಾರು 30 ವರ್ಷಗಳಿಂದ ಚಾಸಾ-1 ರವರು ನನಗೆ ಪರಿಚಯ. ಸುಮಾರು 30 ವರ್ಷಗಳಿಂದ ಆರೋಪಿತರು ನನಗೆ ಪರಿಚಯ. ಆರೋಪಿಗಳಿಗೂ ಚಾಸಾ-1 ರವರಿಗೂ ಸದರಿ ಜಾಗದ ವಿಷಯವಾಗಿ ವ್ಯಾಜ್ಯ ಇತ್ತು ಎಂದರೆ ಸರಿ. ಸದರಿ ವ್ಯಾಜ್ಯ ಇಂದಿಗೂ ಚಾಲ್ತಿಯಲ್ಲಿತ್ತು ಎಂದರೆ ಸರಿ. ಗಲಾಟೆಯಾದ ದಿನ ನಾನು ಚಾಸಾ-1 ರವರ ಪಕ್ಕದ ನನ್ನ ಅಂಗಡಿಯಲ್ಲಿ ಇದ್ದೆ. ನನ್ನ ಅಂಗಡಿಯನ್ನು ನಾನು ಬಾಡಿಗೆಗೆ ಪಡೆದುಕೊಂಡಿದ್ದೇನೆ. ನನ್ನ ಅಂಗಡಿಯ ಮಾಲೀಕರು ಕೃಷ್ಣಶೆಟ್ಟಿ ಸದರಿ ಕೃಷ್ಣಶೆಟ್ಟಿ ನನ್ನ ದೊಡ್ಡಪ್ಪ ಎಂದರೆ ಸರಿ. ನನ್ನ ದೊಡ್ಡಪ್ಪನ ಮೇಲೂ ಕೂಡ ಆರೋಪಿಗಳು

ದಾವೆ ಹೂಡಿದ್ದರು ಎಂದರೆ ಸರಿ. ಓ.ಎಸ್.ಸಂಖ್ಯೆ 146/2016 ರಲ್ಲಿ ನನ್ನ ದೊಡ್ಡಪ್ಪ ಸಹ ಪಕ್ಷಗಾರರು ಎಂದರೆ ಸರಿ. ಸದರಿ ದಾವೆ ಚಾಲ್ತಿಯಲ್ಲಿದ್ದರು ಆರೋಪಿಗಳಿಂದ ಸ್ವತ್ತನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ಯಕ್ಕೆ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ಸರಿ. ನಾನು ಈ ಹಿಂದೆ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ನಾನು ಠಾಣೆಯಲ್ಲಿ ಯಾವುದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಸ್ವತ್ತನ್ನು ಕಬಳಿಸುವ ಸಲುವಾಗಿ ಚಾಸಾ–1 ರವರ ಜೊತೆ ಶಾಮಿಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೆ ಗಲಾಟೆಯಾಗಿಲ್ಲ ಮತ್ತು ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತ ಲೇಖನ ಕೊಟ್ಟು ಓದಿ ನೋಡಿ ಸರಿಪಡಿಸಿ ನಂತರ ಸಹಿ ಮಾಡಲಾಯಿತು)

**ಓ ಹೇ ಕೇ ಸ ಇ ಎ ಒ**

**(ಗಿರೀಶ ಆರ್.ಬಿ)**
**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಗುಂಡ್ಲುಪೇಟೆ**